ಕರ್ನಾಟಕ ವಿಶ್ವವಿದ್ಯಾಲಯ
KARNATAK UNIVERSITY

Azadi Ka Amrit Mahotsav

NAAC Accredited with "A" Grade 2022
ಸಿಂಡಿಕೇಟ ವಿಭಾಗ

ನಂ: ಕವಿವಿ/ಸಿಂಡಿಕೇಟ್/ನಡಾವಳಿಗಳು–45/2024–25/ 10 ದಿನಾಂಕ: 27-06-2024

"ಗೌಪ್ಯ"

ಕರ್ನಾಟಕ ವಿಶ್ವವಿದ್ಯಾಲಯದ ವಿಶೇಷ ಸಿಂಡಿಕೇಟ್ ಸಭೆಯನ್ನು ದಿನಾಂಕ **24 ಜೂನ, 2024** ರಂದು ಮಧ್ಯಾಹ್ನ **01:00** ಗಂಟೆಗೆ ಕವಿವಿ ಮುಖ್ಯ ಆಡಳಿತ ಕಟ್ಟಡದ ಸಿಂಡಿಕೇಟ್ ಸಭಾ ಭವನದಲ್ಲಿ (ಆನ್‌ಲೈನ್ ಮೂಲಕ) ಜರುಗಿಸಲಾಯಿತು. ಸಭೆಯ ನಡಾವಳಿಗಳು ಈ ಕೆಳಗಿನಂತಿವೆ.

**ಸಭೆಯಲ್ಲಿ ಈ ಕೆಳಗಿನಂತೆ ಸದಸ್ಯರು ಉಪಸ್ಥಿತರಿದ್ದರು:**

| | | |
|---|---|---|
| 1. | ಪ್ರೋ. ಕೆ. ಬಿ. ಗುಡಸಿ, ಕುಲಪತಿಗಳು, ಕ.ವಿ.ವಿ. ಧಾರವಾಡ | ಅಧ್ಯಕ್ಷರು |
| 2. | ಡಾ. ರಾಜೇಂದ್ರ ಎಮ್. ನಾಯಕ, ಡೀನರು, ಕ.ವಿ.ವಿ.ಧಾರವಾಡ | ಸದಸ್ಯರು |
| 3. | ಶ್ರೀಮತಿ. ಅಂಜನಾ ಎಸ್. ಬಸನಗೌಡರ, ಹುಬ್ಬಳ್ಳಿ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 4. | ಶ್ರೀಮತಿ. ರತ್ನಾ ಪಾಟೀಲ, ಧಾರವಾಡ | ಸದಸ್ಯರು |
| 5. | ಡಾ. ಚಂದ್ರಶೇಖರ ಲಮಾಣಿ, ಪ್ರಾಚಾರ್ಯರು, ಹಳಿಯಾಳ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 6. | ಡಾ. ಪ್ರೀತಿ ಬಂಡಾರಕರ, ಪ್ರಾಚಾರ್ಯರು, ಕುಮಟಾ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 7. | ಡಾ.(ಶ್ರೀಮತಿ). ಜಯಶ್ರೀ. ಎಸ್., ಹಿರಿಯ ಪ್ರಾಧ್ಯಾಪಕರು, ಕ.ವಿ.ವಿ.ಧಾರವಾಡ | ಸದಸ್ಯರು |
| 8. | ಡಾ. ಎನ್. ವಾಯ್. ಮಟ್ಟಿಹಾಳ, ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ. ಧಾರವಾಡ | ಸದಸ್ಯರು |
| 9. | ಡಾ.ಸಿ. ಕೃಷ್ಣಮೂರ್ತಿ, ಪ್ರಭಾರಿ ಹಣಕಾಸು ಅಧಿಕಾರಿಗಳು, ಕ.ವಿ.ವಿ. ಧಾರವಾಡ | ವಿಶೇಷ ಆಹ್ವಾನಿತರು |
| 10. | ಡಾ. ಎ. ಚನ್ನಪ್ಪ, ಕೆಎಎಸ್, ಕುಲಸಚಿವರು(ಆಡಳಿತ). ಕ.ವಿ.ವಿ.ಧಾರವಾಡ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯ ಕಾರ್ಯದರ್ಶಿಗಳು |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಅಂದರೆ 10 ಜನ ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ಮಧ್ಯಾಹ್ನ 01:00 ಗಂಟೆಗೆ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ನಂತರ ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

A Channappa
ಕುಲಸಚಿವರು



ಕುಲಪತಿಗಳು

**ಕಲಂ ಸಂಖ್ಯೆ–01: ವಿಷಯ–**: ಸನ್ 2018–19 ಹಾಗೂ 2019–20 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ಅನುಸರಣಾ ವರದಿಯನ್ನು ವಿದ್ಯಾವಿಷಯಕ್ ಪರಿಷತ್ ಸಭೆಯು ಪರಿಶೀಲಿಸಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ್ ಸಭೆಯು ಅನುಮೋದಿಸುವ ಕುರಿತು.

ನಿವೇದನೆ:

ಸನ್ 2018–19 ಹಾಗೂ 2019–20 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ಅನುಸರಣಾ ವರದಿಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ರ ಪರಿಚ್ಛೇದ 47 (4) ರನ್ವಯ ವಿದ್ಯಾವಿಷಯಕ್ ಪರಿಷತ್ ಸಭೆ ಮತ್ತು ಸಿಂಡಿಕೇಟ್ ಸಭೆಗಳ ಮುಂದೆ ಮಂಡಿಸಿ ಸದರಿ ಸಭೆಗಳ ಅನುಮೋದನೆ ಪಡೆದು ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕಾಗುತ್ತದೆ.

ಆದ್ದರಿಂದ, ಸನ್ 2018–19 ಹಾಗೂ 2019–20 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ಅನುಸರಣಾ ವರದಿಯ ಕರಡು ಪ್ರತಿಗಳನ್ನು ದಿನಾಂಕ 24.06.2024 ರಂದು ಮುಂಜಾನೆ 11.00 ಗಂಟೆಗೆ ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ಸದರಿ ಸಭೆಯು ನಿರ್ಣಯ ಸಂಖ್ಯೆ–01 ರನ್ವಯ ಈ ಕೆಳಗಿನಂತೆ ಠರಾಯಿಸಲಾಗಿರುತ್ತದೆ.

> **"ಸನ್ 2018-19 & 2019-20 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ಅನುಸರಣಾ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು. ಸದರಿ ಲೆಕ್ಕಪರಿಶೋಧನಾ ಅನುಸರಣಾ ವರದಿಯನ್ನು ಸರಕಾರದ ಅನುಮೊದನೆ ಪಡೆಯಲು ಸರಕಾರಕ್ಕೆ ಕಳುಹಿಸಲು ಸಭೆಯು ನಿರ್ಣಯಿಸಿತು".**

ಮುಂದುವರೆದು, ಮೇಲ್ಕಾಣಿಸಿದ ನಿರ್ಣಯದಂತೆ ಸನ್ 2018–19 ಹಾಗೂ 2019–20 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ಅನುಸರಣಾ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಸನ್ 2018–19 ಹಾಗೂ 2019–20 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ಅನುಸರಣಾ ವರದಿಯನ್ನು ವಿದ್ಯಾವಿಷಯಕ್ ಪರಿಷತ್ ಸಭೆಯು ಪರಿಶೀಲಿಸಿ ಒಪ್ಪಿಕೊಂಡ ನಿರ್ಣಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು.**



A. Channappa
ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ-02: ವಿಷಯ-**: ಸನ್ 2020-21 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ಅನುಸರಣಾ ವರದಿಯನ್ನು ವಿದ್ಯಾವಿಷಯಕ್ ಪರಿಷತ್ ಸಭೆಯು ಪರಿಶೀಲಿಸಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ್ ಸಭೆಯು ಅನುಮೋದಿಸುವ ಕುರಿತು.

ನಿವೇದನೆ:

ಸನ್ 2020-21 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ಅನುಸರಣಾ ವರದಿಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ರ ಪರಿಚ್ಛೇದ 47 (4) ರನ್ವಯ ವಿದ್ಯಾವಿಷಯಕ್ ಪರಿಷತ್ ಸಭೆ ಮತ್ತು ಸಿಂಡಿಕೇಟ್ ಸಭೆಗಳ ಮುಂದೆ ಮಂಡಿಸಿ ಸದರಿ ಸಭೆಗಳ ಅನುಮೋದನೆ ಪಡೆದು ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕಾಗುತ್ತದೆ.

ಆದ್ದರಿಂದ, ಸನ್ 2020-21 ನೇ ಸಾಲಿನ ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ಅನುಸರಣಾ ವರದಿಯ ಕರಡು ಪ್ರತಿಗಳನ್ನು ದಿನಾಂಕ 24.06.2024 ರಂದು ಮುಂಜನೆ 11.00 ಗಂಟೆಗೆ ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ಸದರಿ ಸಭೆಯು ನಿರ್ಣಯ ಸಂಖ್ಯೆ-02 ರನ್ವಯ ಈ ಕೆಳಗಿನಂತೆ ಠರಾಯಿಸಲಾಗಿರುತ್ತದೆ.

> **"ಸನ್ 2020-21ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ಅನುಸರಣಾ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು. ಸದರಿ ಲೆಕ್ಕಪರಿಶೋಧನಾ ಅನುಸರಣಾ ವರದಿಯನ್ನು ಸರಕಾರದ ಅನುಮೊದನೆ ಪಡೆಯಲು ಸರಕಾರಕ್ಕೆ ಕಳುಹಿಸಲು ಸಭೆಯು ನಿರ್ಣಯಿಸಿತು".**

ಮುಂದುವರೆದು, ಮೇಲ್ಕಾಣಿಸಿದ ನಿರ್ಣಯದಂತೆ ಸನ್ 2020-21 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ಅನುಸರಣಾ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಸನ್ 2020-21 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ಅನುಸರಣಾ ವರದಿಯನ್ನು ವಿದ್ಯಾವಿಷಯಕ್ ಪರಿಷತ್ ಸಭೆಯು ಪರಿಶೀಲಿಸಿ ಒಪ್ಪಿಕೊಂಡ ನಿರ್ಣಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು.**

A. Channappa
ಕುಲಸಚಿವರು



ಕುಲಪತಿಗಳು

**ಕಲಂ ಸಂಖ್ಯೆ-03: ವಿಷಯ-:** ಕರ್ನಾಟಕ ವಿಶ್ವವಿದ್ಯಾಲಯದ ಸನ್ 2021-2022 ಮತ್ತು 2022-23ನೇ ಸಾಲಿನ (ದಿನಾಂಕ 01-04-2021 ರಿಂದ 31-03-2022 ರ ಮತ್ತು ದಿನಾಂಕ: 01-04-2022 ರಿಂದ 31-03-2023 ರ ವರೆಗಿನ) ವಾರ್ಷಿಕ ವರದಿಯನ್ನು ವಿದ್ಯಾವಿಷಯಕ್ ಪರಿಷತ್ ಸಭೆಯು ಪರಿಶೀಲಿಸಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸುವ ಕುರಿತು.

ಟಿಪ್ಪಣಿ :

ಕರ್ನಾಟಕ ವಿಶ್ವವಿದ್ಯಾಲಯದ ಸನ್ 2021-2022 ಮತ್ತು 2022-23ನೇ ಸಾಲಿನ (ದಿನಾಂಕ 01-04-2021 ರಿಂದ 31-03-2022 ರ ಮತ್ತು ದಿನಾಂಕ: 01-04-2022 ರಿಂದ 31-03-2023 ರ ವರೆಗಿನ) ವಾರ್ಷಿಕ ವರದಿಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ದ ಅಧಿನಿಯಮ 50(1)ರ ಪ್ರಕಾರ ಸಿದ್ಧಪಡಿಸಲಾಗಿದೆ. ಸದರಿ ವರದಿಗಳನ್ನು ವಿದ್ಯಾವಿಷಯಕ್ ಪರಿಷತ್ ಸಭೆಯ ಹಾಗೂ ಸಿಂಡಿಕೇಟ ಸಭೆಯ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸುವುದು ಅವಶ್ಯವಿರುತ್ತದೆ.

ಸದರಿ ವಾರ್ಷಿಕ ವರದಿಗಳನ್ನು ದಿನಾಂಕ.24.06.2024 ರಂದು ಮುಂಜಾನೆ 11:00 ಗಂಟೆಗೆ ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು. ಸಭೆಯು ಈ ಕೆಳಗಿನಂತೆ ನಿರ್ಣಯಿಸಿತು.

> **"2021-2022 ಮತ್ತು 2022-23ನೇ ಸಾಲಿನ (ದಿನಾಂಕ 01-04-2021 ರಿಂದ 31-03-2022 ರ ಮತ್ತು ದಿನಾಂಕ: 01-04-2022 ರಿಂದ 31-03-2023 ರ ವರೆಗಿನ) ವಿವರವಾದ ಮಾಹಿತಿಯನ್ನೊಳಗೊಂಡ ಕರ್ನಾಟಕ ವಿಶ್ವವಿದ್ಯಾಲಯದ ವಾರ್ಷಿಕ ವರದಿಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ದ 50(1) ನೇ ಅಧಿನಿಯಮದ ಪ್ರಕಾರ ವಾರ್ಷಿಕ ವರದಿಗಳನ್ನು ವಿದ್ಯಾವಿಷಯಕ್ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು. ಸದರಿ ವಾರ್ಷಿಕ ವರದಿಗಳನ್ನು ಸರಕಾರದ ಅನುಮೊದನೆ ಪಡೆಯಲು ಸರಕಾರಕ್ಕೆ ಕಳುಹಿಸಲು ಸಭೆಯು ನಿರ್ಣಯಿಸಿತು."**

ಈ ಮೇಲ್ಕಾಣಿಸಿದ ವಾರ್ಷಿಕ ವರದಿಗೆ ಸಂಬಂದಿಸಿದಂತೆ, ವಿದ್ಯಾವಿಷಯಕ ಪರಿಷತ್ ಸಭೆಯ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ, ಅನುಮೋದನೆಗಾಗಿ ಮಂಡಿಸಲಾಯಿತು.

**ನಿರ್ಣಯ**

**ಕರ್ನಾಟಕ ವಿಶ್ವವಿದ್ಯಾಲಯದ ಸನ್ 2021-2022 ಮತ್ತು 2022-23ನೇ ಸಾಲಿನ (ದಿನಾಂಕ 01-04-2021 ರಿಂದ 31-03-2022 ರ ಮತ್ತು ದಿನಾಂಕ: 01-04-2022 ರಿಂದ 31-03-2023 ರ ವರೆಗಿನ) ವಾರ್ಷಿಕ ವರದಿಯನ್ನು ವಿದ್ಯಾವಿಷಯಕ್ ಪರಿಷತ್ ಸಭೆಯು ಪರಿಶೀಲಿಸಿ ಒಪ್ಪಿಕೊಂಡ ನಿರ್ಣಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು.**

A. Channappa
ಕುಲಸಚಿವರು



ಕುಲಪತಿಗಳು